ii) 1961ರ ವರಮಾನ ತೆರಿಗೆ ಕಾಯಿದೆಯಡಿಯಲ್ಲಿ ವರಮಾನ ತೆರಿಗೆಯನ್ನು ಪಾವತಿ ಮಾಡುತ್ತಿರುವವರು.

3) ಎಲ್.ಟಿ-4 (ಸಿ) (10 ಹೆಚ್.ಪಿ.ಗಿಂತ ಹೆಚ್ಚು ಆಶ್ವಶಕ್ತಿ ಉಳ್ಳ ನೀರಾವರಿ ಪಂಪುಸೆಟ್ಟು ಸ್ಥಾಪನೆಗಳು:

ಈ ವರ್ಗಕ್ಕೆ ಸೇರಿದ ನೀರಾವರಿ ಪಂಪುಸೆಟ್ಟುಗಳ ದರ ಅನುಸೂಚಿ:

ಮಂಜೂರಾದ ವಿದ್ಯುತ್‌ನ ಪ್ರತಿ ಹೆಚ್.ಪಿ. ಅಥವಾ ಅದರ ಭಾಗಕ್ಕೆ ಮಾಸಿಕ ಕನಿಷ್ಟ ರೂ. 800-00 ಮಿತಿಗೆ ಒಳಪಟ್ಟು ಬಳಸಿದ ಎಲ್ಲಾ ಯೂನಿಟ್ಟುಗಳಿಗೆ ಪ್ರತಿ ಯೂನಿಟ್ಟಿಗೆ 135 ಪೈಸೆ.

ಮಂಡ್ಯ ವಿಧಾನ ಸಭಾ ಕ್ಷೇತ್ರದಲ್ಲಿನ ಸಾರಾಯಿ ಅಂಗಡಿಗಳ ಪರವಾನಗಿ:

9 (36) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಮಂಡ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಸಾರಾಯಿ ಅಂಗಡಿಗಳಿವೆ;

2) ಈ ಪೈಕಿ ಅಧಿಕೃತ ಪರವಾನಗಿ ಪಡೆದಿರುವ ಅಂಗಡಿಗಳೆಷ್ಟು;

3) ಸದರಿ ಪರವಾನಗಿ ಪಡೆಯಲು ಅನುಸರಿಸಬೇಕಾದ ನಿಯಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ)

1) 58

2) 58

3) ಕರ್ನಾಟಕ ಅಬಕಾರಿ ಸನ್ನದುಗಳು (ಮದ್ಯವನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಹಕ್ಕಿನ ಗುತ್ತಿಗೆಗಳು) 1969ರ ನಿಯಮಗಳ ಪ್ರಕಾರ ಸಾರಾಯಿ ಮಾರಾಟ ಗುತ್ತಿಗೆ ಹಕ್ಕನ್ನು ವಿಲೇ ಮಾಡಲಾಗುತ್ತದೆ. ಗುತ್ತಿಗೆ ಹಕ್ಕು ಪಡೆದವರಿಗೆ ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5ರ ರೀತ್ಯಾ ಆಕ್ಷೇಪಣಾರಹಿತ ಸ್ಥಳಗಳಲ್ಲಿ, ಸಾರಾಯಿ ಮಾರಾಟ ಮಾಡಲು ಸನ್ನದು ನೀಡಲಾಗುವುದು.

ಕೊಡಗು ಜಿಲ್ಲೆಗೆ ಮುಜರಾಯಿ ಇಲಾಖೆಯಿಂದ ಬಿಡುಗಡೆಯಾದ ಹಣ:

11 (272) ಶ್ರೀ ಅಪ್ಪಚ್ಚು ರಂಜನ್ ಎಂ.ಕಾ. (ಸೋಮವಾರಪೇಟೆ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಮುಜರಾಯಿ ಇಲಾಖೆಯಿಂದ ಕೊಡಗು ಜಿಲ್ಲೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;